ಅ) ಬೀದರ್ ಜಿಲ್ಲೆಯ ಕೆಲವು ಸ್ಥಳಗಳು ಐತಿಹಾಸಿಕ ಸ್ಥಳಗಳಾಗಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪ್ರವಾಸಿ ವರ್ಷ 'ಭಾರತ ಸಂದರ್ಶಿಸಿ' ದಲ್ಲಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೆ?

ಇ) ಹಾಗಿದ್ದಲ್ಲಿ ಆ ಕಾರ್ಯಕ್ರಮಗಳಾವುವು?

ಈ) ಇದಕ್ಕಾಗಿ ವೆಚ್ಚ ಮಾಡಲಿರುವ ಹಣವೆಷ್ಟು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಇದೆ.

ಆ) ಹೌದು.

ಇ) 1) ಕೇಂದ್ರ ಸರ್ಕಾರದ ನೆರವಿನ ಯೋಜನೆ ಅಡಿಯಲ್ಲಿ ಬೀದರ್‌ನಲ್ಲಿರುವ ಮಹ್ಮದ್ ಗವಾನ್ ಮದರಸಕ್ಕೆ ಹೊನಲು ಬೆಳಕಿನ ವ್ಯವಸ್ಥೆ ಮಂಜೂರಾಗಿದ್ದು, ಈ ಕಾರ್ಯವನ್ನು 1991-92ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

2) ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಲಾಗಿದೆ.

ಈ) 1) ಮಹ್ಮದ್ ಗವಾನ್ ಮದರಸಕ್ಕೆ ಹೊನಲು ಬೆಳಕಿನ ವ್ಯವಸ್ಥೆಗಾಗಿ ಸುಮಾರು ರೂ.5.00 ಲಕ್ಷಗಳನ್ನು ವೆಚ್ಚ ಮಾಡಲಾಗುವುದು.

2) ಹುಮ್ನಾಬಾದ್‌ನಲ್ಲಿ ನಿರ್ಮಿಸಿರುವ ಹೆದ್ದಾರಿ ಸೌಲಭ್ಯಕ್ಕೆ ರೂ.೩.೪೧ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಕೃಷ್ಣಾ ಮೇಲ್ದಂಡೆಯಲ್ಲಿ ಕಾಮಗಾರಿಗಳನ್ನು ಚುರುಕುಗೊಳಿಸುವುದು.

2359-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆಯಲ್ಲಿ ಕಾಮಗಾರಿಗಳನ್ನು ಚುರುಕುಗೊಳಿಸುವಲ್ಲಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು-

ಆ) ಈ ಯೋಜನೆಗಾಗಿ ಪ್ರಸಕ್ತ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣವೆಷ್ಟು?

ಇ) ಇದಕ್ಕಾಗಿ ಇದುವರೆವಿಗೂ ಬಿಡುಗಡೆ ಮಾಡಲಾದ ಹಣವೆಷ್ಟು?

ಈ) ಈ ಯೋಜನೆಗೆ ವಿಶ್ವಬ್ಯಾಂಕ್ ನೆರವು ನೀಡಲು ಸಿದ್ಧವಾಗಿದ್ದರೂ ಸರ್ಕಾರ ಇರುವ ಹಣವನ್ನೇ ಖರ್ಚು ಮಾಡಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿನ ಕಾಮಗಾರಿಗಳನ್ನು ಚುರುಕುಗೊಳಿಸಲು ಸರ್ಕಾರವು ಈ ಕೆಳಕಂಡ ಮುಖ್ಯ ಕ್ರಮಗಳನ್ನು ಕೈಗೊಂಡಿದೆ:-

(1) ನಿರ್ಮಾಣ ಹಂತದಲ್ಲಿರುವ ಮೊದಲ ಘಟ್ಟದ 2ನೇ ಹಂತದ ಯೋಜನೆಗೆ ವಿಶ್ವ ಬ್ಯಾಂಕಿನ ನೆರವು ಪಡೆಯಲಾಗಿದೆ.

(2) ಕಾಲಕಾಲಕ್ಕೆ ಅದ್ಯತೆಯ ಮೇಲೆ ಯೋಜನೆಯ ಕಾಮಗಾರಿಗಾಗಿ ಹಣ ಬಿಡುಗಡೆ ಮಾಡುವುದು.

(3) ಕಾಲುವೆ ಮತ್ತು ರಸ್ತೆ ನಿರ್ಮಾಣಕ್ಕಾಗಿ ಬೇಕಾದ ಭೂಮಿಯನ್ನು ತ್ವರಿತಗತಿಯಲ್ಲಿ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಒಪ್ಪಿಗೆ ತೀರ್ಪು (Consentaward) ನೀಡುವುದು.

(4) ಗುತ್ತಿಗೆದಾರರ ವ್ಯಾಜ್ಯಗಳನ್ನು ಶೀಘ್ರವಾಗಿ ಬಗೆಹರಿಸಲು ಒಂದು ಸಮಿತಿಯನ್ನು ರಚಿಸಲು ಪರಿಶೀಲಿಸಲಾಗುತ್ತಿದೆ.

(5) ಯೋಜನೆಯಲ್ಲಿನ ಎಲ್ಲಾ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡುವುದು.

(6) ಯೋಜನೆಯಿಂದ ಹೊರಕ್ಕೆ ಸಿಬ್ಬಂದಿಯನ್ನು ವರ್ಗಾವಣೆ ಮಾಡದೆ ಇರುವುದು.

(7) ಯೋಜನೆಯ ಪ್ರಗತಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ ಸಲಹೆ/ನಿರ್ಧಾರ ನೀಡಲು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಹೈ ಪವರ್ ಸಮಿತಿಯನ್ನು ರಚಿಸಲಾಗಿದೆ.

(8) ಮುಖ್ಯ ಮಂತ್ರಿಗಳು ಸೇರಿದಂತೆ ವಿವಿಧ ಹಂತಗಳಲ್ಲಿ ಯೋಜನಾ ಪ್ರಗತಿಯ ಪರಿಶೀಲನೆ.

ಅ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಾಗಿ 107 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ.

ಆ) ಇದ್ದುವರೆವಿಗೂ ನಿರ್ಮಾಣ ಕಾರ್ಯಗಳಿಗಾಗಿ 21.7 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಯೋಜನೆಯ ಪ್ರಗತಿಯಲ್ಲಿ ಇದುವರೆವಿಗೂ ಆದ ವಿಳಂಬಕ್ಕೆ ಮುಖ್ಯ ಕಾರಣಗಳು ಈ ರೀತಿ ಇವೆ:-

(1) ಭೂಸ್ವಾಧೀನದಲ್ಲಿ ಆದ ವಿಳಂಬ

(2) ಕೊಲ್ಲಿ ಯುದ್ಧದ ಪರಿಣಾಮದಿಂದಾಗಿ ನಿರ್ಬಂಧಿತ ಇಂಧನ ಪೂರೈಕೆ

(3) ಎಸ್‌ಪಿಡಿ ದರಗಳಂತೆ ಸಿಮೆಂಟ್ ಪೂರೈಕೆಯಲ್ಲಿ ಆದ ವಿಳಂಬ.

(4) ವಿಶ್ವ ಬ್ಯಾಂಕಿನ ಸಹಮತಿಯೊಂದಿಗೆ ಆಗಿಂದಾಗ್ಗೆ ಟೆಂಡರ್ ನಿಯಮಾವಳಿಗಳಲ್ಲಿ ಅನಿವಾರ್ಯವಾಗಿ ಮಾಡಬೇಕಾದ ಮಾರ್ಪಾಡಿನಲ್ಲಿ ಆದ ವಿಳಂಬ.

(5) ಹಣ ಭರವಸೆ ಪತ್ರ ಬಿಡುಗಡೆಯಲ್ಲಿ ಆದ ಕೊರತೆ.

ಬೀದರ್ ಜಿಲ್ಲೆಯಲ್ಲಿರುವ ಕೆರೆಗಳು

2073 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಕೆರೆಗಳ ಒಟ್ಟು ಸಂಖ್ಯೆ ಎಷ್ಟು:-

ಆ) ಈ ಕೆರೆಗಳ ಪೈಕಿ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಬರುವ ಕೆರೆಗಳೆಷ್ಟು? ಸಣ್ಣ ನೀರಾವರಿ ಅಧೀನದಲ್ಲಿ ಬರುವ ಕೆರೆಗಳೆಷ್ಟು ಮತ್ತು ದೊಡ್ಡ ನೀರಾವರಿ ಅಧೀನದಲ್ಲಿ ಬರುವ ಕೆರೆಗಳೆಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಇವುಗಳ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದೆ ಹಾಗೂ ಎಷ್ಟು ಕೆರೆಗಳು ಬತ್ತಿವೆ?

ಈ) ಈ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 91 ಕೆರೆಗಳಿವೆ.

ಆ) ಈ ಕೆರೆಗಳ ಪೈಕಿ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ 55 ಕೆರೆಗಳು, ಸಣ್ಣ ನೀರಾವರಿ ಅಧೀನದಲ್ಲಿ 36 ಕೆರೆಗಳು ಬರುತ್ತವೆ ಮತ್ತು ದೊಡ್ಡ ನೀರಾವರಿ ಅಧೀನದಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.